

## ಯಾರಿಗೂ ಹೇಳೋಣು ಬ್ಯಾಡ...

ಅವಳಿಗೆ ಇವು ಹೊಸದಲ್ಲ ಈ ಇರುಳು ಈ ಬಿರುಗಾಳಿ
ಬಾಲ್ಯದಿಂದಲೇ ಅವಳ ಸಂಗಾತಿ ಹೊರಗುಳಿಯುವ ಚಾಳಿ
ಎಷ್ಟೊಂದು ಮಂಕು, ಯಾಕಷ್ಟು ಜುಜುಬಿ ಮನೆಯೊಳಗಿನಿಂದ ಕಂಡಾಗ
ದಾದಿಯರ ಸೆರೆಯಾಚೆ ಹೊರಲೋಕದಲ್ಲಿ ಎಂಥ ವೇಗ ಆವೇಗ...

ಯಾವ ಸುಂಟರಗಾಳಿ ಯಾವ ಭೀಕರ ರಾತ್ರಿ ಈ ಒಳಗಾಳಿಗೆ ಸರಿಮಿಗಿಲು
ನಜ್ಜುಗುಜ್ಜಾಗಿದೆ ಅಂತರಂಗದ ತೋಟ ಮೈನವಿರುವಂಥ ದಿಗಿಲು...

ಓ ಅವನು ಬಂದ ಕರೆದೆತ್ತಿಕೊಂಡ ರೇಷಿಮೆ ನೂಲೇಣಿ ಮೆಟ್ಟಿಲಿಂದ
ರಥದೊಳಗಡೆ ಜೊತೆಯಾಗಿರು ಬಾ ಬಾ ಬಾ ಎಂದ
ಹೀಗೆಯೆ ತೇಲುತ ಮುಂದಕೆ ಮುಂದಕೆ ಮೊದಲಾಯಿತು ಪಯಣ

ಕೊನೆಗುಳಿಯಿತು ರಥವೊಂದೆ ಸುತ್ತಲು ಬರಿ ಬಯಲು...

ಈಗ ಅವಳ ಮೂಗನ್ನು ತುಂಬಿದೆ ಕಪ್ಪುರಥದ ಗಮಲು
ಅದರ ಸುತ್ತಲೂ ಇನ್ನೇನು ಬರಲಿರುವ ಆಘಾತದ ದಿಗಿಲು.
ರಥಕ್ಕೆ ಅಂಟಿದೆ ಎಲ್ಲಕಡೆ ಹರಡಿದೆ ಕೊರೆಯುವ ಶೀತಲಸ್ಪರ್ಶ
ಅವಳೊಳಗು ತುಂಬಿದೆ ಅಂಥದೇ ಕಪ್ಪು ಅಂಥದೆ ಥಂಡಿಯ ಹರ್ಷ.
ಹುದುಗಿದಳು ಅವಳು ತನ್ನೊಳಗೆ ಸರಿದಳು. ಕಡುಕಪ್ಪು ಕೂದಲು ಚಿಂತೆ
ಮುಟ್ಟಿ ನೇವರಿಸಿ ಮುತ್ತಿಟ್ಟುಕೊಂಡಳು ಅದು ಉಳಿಯುವುದೆಂಬಂತೆ.
ಅವಳಿಗೆ ಅವಳೇ ಗೊತ್ತಿಲ್ಲ ಈಗ, ಅರಿಯದ ಯಾರದೊ ಮಾತು:
'ನಾನು ಇದ್ದೇನೆ ನಿನ್ನೊಡನೆ'

Elopement, New Poems